# Teaching is an Art, Not a Science

"ಕಲಿಸುವುದೊಂದು ಕಲೆ , ವಿಜ್ಞಾನವಲ್ಲ "

*Teacher Man: A Memoir*
by Frank McCourt
Scribner, USA (November 2005); 272 pages

ಸೀತಾಲಕ್ಷ್ಮಿ ನಟರಾಜನ್

*ಏಂಜೆಲಾ 'ಸ್ ಆಶಸ್* ಎಂಬ ಪುಸ್ತಕದ ಲೇಖಕರಾದ ಪುಲಿಟ್ಜರ್ ಪ್ರಶಸ್ತಿ ವಿಜೇತ ಫ್ರಾಂಕ್ ಮ್ಯಾಕ್ ಕೋರ್ಟ್ ಅವರು ಮೇಲ್ಕಾಣುವ ಪ್ರಸಿದ್ಧ ಮಾತಿನ ("ಕಲಿಸುವುದೊಂದು ಕಲೆ , ವಿಜ್ಞಾನವಲ್ಲ ") ಸತ್ಯವನ್ನು ಒಬ್ಬ ಶಿಕ್ಷಕರಾಗಿ, ಕಥೆಗಾರರಾಗಿ , ಬರಹಗಾರರಾಗಿ, ತನ್ಮೂಲಕ ಒಬ್ಬ ಮನುಷ್ಯನಾಗಿ ರೂಪುಗೊಂಡ, "ವಾಸ್ತವಿಕ ನೆಲೆಯಲ್ಲಿ ಮೂಡಿಬಂದ ", "ಸರಳ"ವಾದ ಆತ್ಮಕಥೆಯ ರೂಪದಲ್ಲಿರುವ ಕಥನ "ಟೀಚರ್ ಮ್ಯಾನ್" ನಲ್ಲಿ ಚಿತ್ರವತ್ತಾಗಿ ನಿರೂಪಿಸುತ್ತಾರೆ .

ಈ ಪುಸ್ತಕವು ಒಬ್ಬ ಶಿಕ್ಷಕರಾಗಿ ಲೇಖಕರ ಅನುಭವ ಹಾಗೂ ಪ್ರಯೋಗಗಳ ಮತ್ತು ಅವರದೇ ಆದ ಅಭದ್ರತೆ ಹಾಗು ಸೋಲುಗಳಿಂದ ಹಾಗೂ ಅವರ ಮಧ್ಯ ವಯಸ್ಸಿನ ಬಿಕ್ಕಟ್ಟುಗಳಿಂದ ಕೂಡಿದ ಕಷ್ಟದ ಬದುಕು ಇವೆರಡು ಸಮ್ಮಿಳಿತವಾದಂಥ ಅತ್ಯಂತ ಮನರಂಜನೀಯವಾದ ಕಥನ ಎನ್ನಬಹುದು . ಆದರೆ ಈ ಪುಸ್ತಕ ವಿಮರ್ಶೆಯಲ್ಲಿ ನಮ್ಮ ಗಮನವೆಲ್ಲ ಶಿಕ್ಷಕರು ಹಾಗು ಅವರ ಆಸಕ್ತಿಕರವಾದ ಬೋಧನಾ ಕ್ರಮಾಧಾರಿತ ಶಿಕ್ಷಣ ವಿಧಾನಗಳ ಮೇಲೆಯೇ ಕೇಂದ್ರೀಕೃತವಾಗಿದೆ .

ಪ್ರತಿಯೊಬ್ಬ ಶುದ್ಧಾಂತಃಕರಣದ , ಮಾಗಿದ ಶಿಕ್ಷಕರು ತಮ್ಮ ಶಿಕ್ಷಕ ವೃತ್ತಿಯ ಮೊದಮೊದಲು ಎಲ್ಲೋ ಒಂದುಕಡೆ ಅನುಭವಿಸುವ ಅನಿಶ್ಚಿತ ಭಾವನೆಗಳನ್ನು ಮೊದಲನೇ ಅಧ್ಯಾಯದ ಮೊದಲ ನಾಲ್ಕು ಸಾಲುಗಳು ಚೆನ್ನಾಗಿ ಕಟ್ಟಿಕೊಡುತ್ತವೆ :
"ಇಗೋ ಅವರು ಬರುತ್ತಿದ್ದಾರೆ.
ನಾನು ಮಾತ್ರ ತಯಾರಿಲ್ಲ .
ಹೇಗೆ ತಯಾರಿರಲಿ ನಾನು ?
ನಾನೊಬ್ಬ ಹೊಸ ಶಿಕ್ಷಕ , ಕಲಿಸುತ್ತಲೇ ಕಲಿಯುವವ "

ಒಬ್ಬ ಶಿಕ್ಷಕ ಹಾಗು ಕಲಿಕಾರ್ಥಿಯಾಗಿ ಕಳೆದ ೩೦ ವರ್ಷದ ತಮ್ಮ ಪಯಣದ ಆತ್ಮಕಥೆಯ ಈ ನಿರಾಡಂಬರ ಹಾಗು ನಿರ್ಭಾವುಕವಾದ ವಾಸ್ತವಿಕತೆಯ ಸ್ಥಾಯಿ ದನಿಯೇ ಈ ಕಥೆಯನ್ನು ಒಂದು ಆಸಕ್ತಿ ಕೆರಳಿಸುವ ಸೂಕ್ಷ್ಮದೃಷ್ಟಿಯುಳ್ಳ ಓದುವಿಕೆಯನ್ನಾಗಿ ಮಾರ್ಪಾಟು ಮಾಡುತ್ತದೆ .

"ವಿಷಯ ಏನೇ ಆಗಿರಲಿ , ಬೋಧನೆಯಲ್ಲಿ ಶಿಕ್ಷಕ ನಿಜಕ್ಕೂ ನಿರೂಪಿಸಿಕೊಳ್ಳುವುದು ತನ್ನನ್ನೇ"

ವಿಶೇಷ ನಮ್ರತೆ ಹಾಗು ಅಲ್ಲಗಳೆಯಲಾಗದ ನಿರ್ಭಾವುಕ-ಸೂಕ್ಷ್ಮ ಹಾಸ್ಯ ಪ್ರಜ್ಞೆಯಿಂದ ಕೂಡಿದ ಒಬ್ಬ ಶಿಕ್ಷಕರಾಗಿ ಮ್ಯಾಕ್ ಕೋರ್ಟ್ ಅವರು ಬೇರೆ ವೃತ್ತಿಗಳಲ್ಲಿ ಸಹಜವಾಗಿ ಕಾಣಸಿಗದ ಮಾನವನ ಈ ಮೂಲ ಗುಣಸ್ವಭಾವದ ಸಂಕೇತವಾಗಿದ್ದಾರೆ . ಬೇಸರದ ಸಂಗತಿಯೆಂದರೆ ಈ ಅನಾರೋಗ್ಯಕರ ಸ್ಪರ್ಧಾ ಪ್ರವೃತ್ತಿ ಹಾಗು ಅದಕ್ಕೆ ನಡೆಯುವ ಅತಿಯಾದ ಹೋರಾಟ ಶಿಕ್ಷಣ ಕ್ಷೇತ್ರಕ್ಕೂ ಕಾಲಿಟ್ಟು ಅದರೊಳಗೆ ಹಾಸುಹೊಕ್ಕಾಗಿಬಿಟ್ಟಿದೆ . ಆದರೆ , ಮ್ಯಾಕ್ ಕೋರ್ಟ್ ಅವರ ಶಿಕ್ಷಣದ ರೀತಿ ತುಂಬಾ ಚೇತೋಹಾರಿಯಾಗಿದ್ದು ಶಿಕ್ಷಕರಿಗೆ ಅದರಲ್ಲೂ ವಿಶೇಷವಾಗಿ ತನ್ನ ಶಿಷ್ಯರನ್ನು ಒಳಗಣ್ಣಿನಿಂದ ಬಲ್ಲ ಶಿಕ್ಷಕರಿಗೆ ಭರವಸೆ ಮೂಡಿಸುವಂತೆ ಇದೆ . ಅದರಲ್ಲೂ ಶಿಕ್ಷಕರು ಮಕ್ಕಳಲ್ಲಿ ಹುದುಗಿಹೋಗಿರುವ

ಕುತೂಹಲ ಹಾಗು ಉತ್ಕೃಷ್ಟತೆಯ ಗುಣಗಳನ್ನು ಸ್ಪರ್ಶಿಸಿ ಅವರ ಪ್ರತಿಭೆಯನ್ನು ಹೊರಹೊಮ್ಮಿಸಲು ಉದ್ಯುಕ್ತರಾಗಿದ್ದಲ್ಲಿ ಕೆಲಸ ಇನ್ನೂ ಸುಲಭವಾಗುತ್ತದೆ . ಅನೇಕ ವೇಳೆ ಮಕ್ಕಳ ಬದುಕಿನಲ್ಲಾಗುವ ಹಾನಿಕರವಾದ ಪ್ರಭಾವವುಳ್ಳ ಅನೇಕ ಬಾಹ್ಯ ಅಂಶಗಳಿಂದ ಅವರ ಈ ಉತ್ಕೃಷ್ಟತೆಯ ಗುಣಗಳು ಮೇಲ್ಮೈಗೆ ಸಿಗದಂತೆ ಆಳವಾಗಿ ಅಡಗಿರುತ್ತವೆ.

ಅವರು ಕೆಲಸ ಮಾಡಿದ ಅಮೆರಿಕಾದ ಹಲವು ಶಾಲೆಗಳು ಎಂಥ “ಹದಿಹರೆಯದ ಬೇಗುದಿ”ಯ ಸ್ಥಿತಿಯ ಕಲಸುಮೇಲೋಗರಗಳಾಗಿದ್ದವೆಂದರೆ, "ಅವರು ಗುಂಪು ಕಟ್ಟಿಕೊಂಡು ಬೇರೆಯ ಗುಂಪುಗಳೊಂದಿಗೆ ಹೊಡೆದಾಡುತ್ತಿದ್ದರು , ಚಲನಚಿತ್ರದಲ್ಲಿ ತೋರಿಸುವ ಹತ ಭಾಗ್ಯ ಪ್ರೇಮಕಥೆಯುಳ್ಳ , ನಾಟಕೀಯ ಹಿನ್ನೆಲೆ ಸಂಗೀತವುಳ್ಳ ಬೀದಿ ಜಗಳದಂತಾಗಿರಲಿಲ್ಲ , ಕೆಟ್ಟದಾಗಿ ಹೊಡೆದಾಡಿಕೊಳ್ಳುತ್ತಿದ್ದರು , ಗುರುಗುಟ್ಟುತ್ತ ಬೈದಾಡಿಕೊಳ್ಳುತ್ತ ಬಡಿದಾಡಿಕೊಳ್ಳುತ್ತಿದ್ದರು.... ಕಾಲ್ಕೆಳಗಿನ ಹುಲ್ಲಿನ ಮೇಲೆಲ್ಲಾ ರಕ್ತದ ಕಲೆ ಮಾಡುತ್ತಿದ್ದರು , ಆ ರಕ್ತ ಯಾರಿಂದ ಬಂದರೂ ಕಡೆಗೂ ಅದು ಕೆಂಪೇ ..."

ಅವರಿಗೆ ಸಿಕ್ಕ ಶಾಸ್ತ್ರೋಕ್ತ ಶಿಕ್ಷಣವು ಅವರಿಗೆ "ಅನಿಷ್ಟ ಸಂಗತಿಗಳಿಗೆ ಕೆಂಪು ಲೇಖನಿಯನ್ನು ಬಳಸಲು" ಹೇಳಿಕೊಟ್ಟಿತ್ತು; ಎಷ್ಟೇ ಆದರೂ “ಲೇಖನಿ ಅದು ಶಿಕ್ಷಕರ ಅತ್ಯಂತ ಶಕ್ತಿಶಾಲಿ ಆಯುಧ ". ಅವರ ಮೇಲಧಿಕಾರಿಗಳು ಮತ್ತು ವಿಭಾಗದ ಮುಖ್ಯಸ್ಥರು ಅವರಿಗೆ ಮಕ್ಕಳಲ್ಲಿ ತಮ್ಮ ಬಗ್ಗೆ ಭಯ ಮತ್ತು ವಿಸ್ಮಯವನ್ನು ಹುಟ್ಟಿಸಿ, ಸಂತೋಷ ಪಡಿಸಲು ದುಸ್ಸಾಧ್ಯವಾಗುವಂತೆ ನಡೆದುಕೊಳ್ಳಲು ಹೇಳಿದರೂ ಅವರ ಕೈಲಿ ಹಾಗೆ ಮಾಡಲು ಸಾಧ್ಯವಾಗಲಿಲ್ಲ

ಸ್ವತಃ ಮ್ಯಾಕ್ ಕೋರ್ಟ್ ಅವರೇ ಒಬ್ಬ ಶಿಕ್ಷಕರಾಗಿ ಏನನ್ನು ಬರೆದರೋ, ಹೇಗೆ ಬದುಕಿದರೋ ಅದುವೆ ಬೋಧನಾ ಕ್ರಮದ ಆದರ್ಶಪ್ರಾಯ ಮಾರ್ಗವೆಂಬ ಭಾವ ಎಲ್ಲೂ ಮೂಡದಂತೆ ತಮ್ಮ ಹೋರಾಟ ಹಾಗೂ ಕಲಿಕೆಗಳನ್ನು ನಿರೂಪಿಸಿದ್ದಾರೆ. ಅವು ಹೀಗಿವೆ:
. ನಿಮ್ಮ ಬೋಧನಾ ವಿಷಯದಲ್ಲಿ ನಿಮಗೆ ಆಸಕ್ತಿ ಇರಲಿ
. ನಿಮ್ಮ ವಿಷಯದ ಬಗ್ಗೆ ನಿಮಗೆ ಆಳವಾಗಿ ಅರಿವಿರಲಿ
. ಯಾವುದಾದರು ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಇರುವ ಅತ್ಯುತ್ತಮ ವಿಧಾನವೆಂದರೆ ಅದನ್ನು ನಾವಾಗೇ ಕಂಡುಕೊಳ್ಳುವುದಾಗಿದೆ.
. ಹೇಗೆ ಕಲಿಯಬೇಕೆಂದು ಮಕ್ಕಳಿಗೆ ಕಲಿಸಿ
. ಅವರು ಊಹಿಸುವುದನ್ನು ಕಲಿಯಲಿ
. ಅವರು ಪುರಾವೆಯನ್ನು ಸಮರ್ಥಿಸುವುದನ್ನು ಕಲಿಯಲಿ
, ಎಲ್ಲವನೂ ಹೇಳಿಕೊಡಲು ಹೋಗಬೇಡಿ
. ಎಲ್ಲವನ್ನು ಅವರ ಗಂಟಲೊಳಗೆ ತುರುಕಲು ನೋಡಬೇಡಿ

" ಮಹಾನ್ ಸಂಶೋಧನೆಯೊಂದು ಮಹಾನ್ ಸಮಸ್ಯೆಯೊಂದಕ್ಕೆ ಪರಿಹಾರ ಕಂಡುಹಿಡಿಯುವುದು. ಆದರೆ ಯಾವುದೇ ಸಮಸ್ಯೆಯ ಪರಿಹಾರದಲ್ಲೂ ಎಳ್ಳಷ್ಟು ಸಂಶೋಧನೆಯಾದರೂ ಇದ್ದೇ ಇರುತ್ತದೆ. ( ಜಾರ್ಜ್ ಪೊಲ್ಯ , ಜಗದ್ವಿಖ್ಯಾತ ಗಣಿತಶಾಸ್ತ್ರಜ್ಞ ).
ಖಚಿತವಲ್ಲದ, ಸಾಂಪ್ರದಾಯಿಕವಲ್ಲದ, ಅನಿಶ್ಚಿತ ಇಂಗ್ಲಿಷ್ ಬೋಧಕರಾದ ಮ್ಯಾಕ್ ಕೋರ್ಟ್ ಅವರು ಮಾಡುವುದೂ ಇದನ್ನೇ. ತಮ್ಮ ಸಹಜ ಸ್ಫೂರ್ತಿಯುತವಾದ, ಮೇಲ್ನೋಟಕ್ಕೆ ಆಘಾತಕಾರಿ ಎನಿಸುವ (ಆದರೂ ಅತ್ಯಂತ ಯಶಸ್ವಿಯಾದ) ತಮ್ಮ ಪ್ರಯೋಗಗಳಿಂದ ವಿದ್ಯಾರ್ಥಿಗಳಲ್ಲಿ ಓದು-ಬರೆಹದ ಬಗ್ಗೆ ಮೊದಲಿಗೆ ಕುತೂಹಲವನ್ನೂ, ಕ್ರಮೇಣ ಓದುವಿಕೆ ಬರೆಯುವಿಕೆಯಲ್ಲಿ ಅಗಾಧ ಮೋಹವನ್ನೂ ಉಂಟು ಮಾಡುತ್ತಿದ್ದರು.

ಸೃಜನಾತ್ಮಕ ಬರವಣಿಗೆಯ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಮಕ್ಕಳ ಪದ್ಯಗಳನ್ನು ಬರೆಯುವುದು, ಅಡುಗೆ ಪುಸ್ತಕಗಳನ್ನು ಪರಿಶೋಧಿಸುವುದು ಇವೇ ಮುಂತಾದ ಕೆಲಸಗಳನ್ನು ಕೊಡುತ್ತಿದ್ದರು.
ತಮಗೆ ಒಪ್ಪಿಸಿದ ಕೆಲಸವನ್ನು ಪೂರ್ಣಗೊಳಿಸದಿದ್ದಕ್ಕೆ ಮಕ್ಕಳು ತಂದ 'ಕಳ್ಳರುಜುಮಾಡಿದ ಕ್ಷಮಾಪಣೆ ಪತ್ರಗಳನ್ನಿಟ್ಟುಕೊಂಡು' ಅವರು ಕಂಡುಹಿಡಿಯುವ ಅತ್ಯಂತ ಸ್ಫೂರ್ತಿದಾಯಕ ಹಾಗೂ ನಗೆಯುಕ್ಕಿಸುವ ಕಾರ್ಯಭಾರದ ಬಗ್ಗೆಯಂತೂ ಓದಿಯೇ ತಿಳಿಯಬೇಕು . ಅವರು ಈ ಚೀಟಿಗಳನ್ನು

'ಶಾಲೆಯಲ್ಲಿ ಅಥವಾ ಮನೆಯಲ್ಲಿ ಮಾಡಬೇಕಾಗಿರುವ ಯಾವುದೇ ರೀತಿಯ ಬರವಣಿಗೆಯ ಕೆಲಸಕ್ಕೆ' ತಮ್ಮ ವಿದ್ಯಾರ್ಥಿಗಳು ತೋರುವ ಪ್ರತಿರೋಧದ ವಿರುದ್ಧ ಸರಿಯಾದ ಬರಹ ಅಸ್ತ್ರಗಳನ್ನಾಗಿ ಬಳಸಿಕೊಳ್ಳುತ್ತಾರೆ. ಅಂತಿಮವಾಗಿ ಕೃತಿಯು ಸ್ಟೇಟನ್ ದ್ವೀಪದ ಶಿಕ್ಷಣ ಇಲಾಖೆಯ ಮುಖ್ಯಸ್ಥರಾದ ಮಾರ್ಟಿನ್ ವೂಲ್ಫ್ ಸನ್ ಅವರಿಂದ "ಪ್ರತಿಭಾಪೂರ್ಣ " ವಾದುದೆಂದು ಕರೆಸಿಕೊಳ್ಳುತ್ತದೆ, ಅಲ್ಲದೇ ಕೃತಿಯನ್ನು ವಿದ್ಯಾರ್ಥಿಗಳು ಸಹ ಬಹಳವಾಗಿ ಆನಂದಿಸುತ್ತಾರೆ.

"ಪಾಠ ಮಾಡುವ ಬದಲು ನಾನು ಅವರಿಗೆ ಕಥೆಗಳನ್ನು ಹೇಳಿದೆ . ಅವರು ತರಗತಿಯಲ್ಲಿ ಸುಮ್ಮನೆ ಕೂತಿರುವಂತೆ ಮಾಡಲು ಏನನ್ನಾದರೂ ಹೇಳುತ್ತಿದ್ದೆ ". ತಮ್ಮ ವಿದ್ಯಾರ್ಥಿಗಳಿಗೆ ತಮ್ಮ ವೈಯಕ್ತಿಕ ಬದುಕಿನೊಳಗೆ ,ಬಾಲ್ಯದೊಳಗೆ , ಅವರ ಯೌವನದೊಳಗೆ ಇಣುಕಿ ನೋಡಲು ಮತ್ತು ಅವರ ದೌರ್ಬಲ್ಯಗಳನ್ನು (ಕಥೆಗಳ ಮೂಲಕ ) ಅರಿಯಲು ಅನುವು ಮಾಡಿಕೊಡುವುದರ ಮೂಲಕ ಅವರು ತಮ್ಮನ್ನು ತಾವು ಸೂಕ್ಷ್ಮ ಸನ್ನಿವೇಶಗಳಿಗೆ ಒಡ್ಡಿಕೊಂಡರು, ವಿದ್ಯಾರ್ಥಿಗಳಲ್ಲಿ ಇವರು ನಮ್ಮವರೇ ಎಂಬ ಭಾವ ಮೂಡಿಸಿದರು.

ಆಳದಲ್ಲಿ, ಒಬ್ಬ ಒಳ್ಳೆಯ ಶಿಕ್ಷಕರೆಂಬುದರ ಅರ್ಥ "ಬಹು-ಕಾರ್ಯ ಸಾಧನೆ ಮಾಡುವ , ಕಾಳಜಿ ತೋರುವ ಹಾಗು ಸಹಿಷ್ಣುವಾದ ಮನುಷ್ಯ ' ಎಂದೆನ್ನಬಹುದು . ' ಈ ಅಂಶವು "ಆ ಅನ್ಯಾಯಕ್ಕೊಳಗಾದ ದಯನೀಯ ಮಗುವಿನ ಹಿನ್ನೆಲೆಯಲ್ಲಿ ಪ್ರಕಾಶಮಾನವಾಗಿ ಹೊಳೆಯುವ ಸರ್ವೇ ಸಾಧಾರಣ ಘಟನೆ ಹಾಗು ಸನ್ನಿವೇಶಗಳ ಭಿತ್ತಿಚಿತ್ರವಾಗಿರುವ " ಈ ಸ್ಮೃತಿಚಿತ್ರಣದಲ್ಲಿ ಬಹಳ ಸುಂದರವಾಗಿ ಮೂಡಿಬಂದಿದೆ .

"ನಾನು ಪಾಠ ಮಾಡುತ್ತಿದ್ದೇನೆಂದು ಅವರು ತಿಳಿದಿದ್ದರು, ನಾನೂ ಪಾಠ ಮಾಡುತ್ತಿದ್ದೇನೆಂದೇ ತಿಳಿದಿದ್ದೆ . ನಿಜವಾಗಿ ನಾನು ಕಲಿಯುತ್ತಿದ್ದೆ. ನಿಮ್ಮನ್ನು ನೀವು ಶಿಕ್ಷಕರೆಂದು ಕರೆದುಕೊಳ್ಳುವಿರೇ? ನಾನಂತೂ ನನ್ನನ್ನು ಶಿಕ್ಷಕನೆಂದು ಕರೆದುಕೊಳ್ಳಲಿಲ್ಲ . ನಾನು ಶಿಕ್ಷಕನಿಗಿಂತ ಹೆಚ್ಚಿನದೇನೋ ಆಗಿದ್ದೆ ಮತ್ತು ಅದಕ್ಕಿಂತ ಕಮ್ಮಿ ಕೂಡ ಆಗಿದ್ದೆ . ಪ್ರೌಢ ಶಾಲೆಯ ತರಗತಿಯಲ್ಲಿ ನೀವೊಬ್ಬ ಡ್ರಿಲ್ ಮಾಸ್ಟರ್ , ಒಬ್ಬ ಪುರೋಹಿತ, ಒರಗಿ ಕಣ್ಣೀರಿಡಲು ಒಂದು ಭುಜ , ಶಿಸ್ತುಪಾಲಕ , ಹಾಡುಗಾರ , ಕೆಳದರ್ಜೆಯ ಒಬ್ಬ ವಿದ್ವಾಂಸ , ಒಬ್ಬ ಗುಮಾಸ್ತ ,.... ಕಡೆಯ ಆಸರೆಯಾಗಿ ಒಬ್ಬ ಮನೋವೈದ್ಯ . "

'ಶಿಕ್ಷಕ'ರೆನಿಸಿಕೊಂಡ ನಮ್ಮ ಪೈಕಿ ಎಷ್ಟು ಜನ ನಮ್ಮ ತರಗತಿಗಳಲ್ಲಿ ಓದುತ್ತಿರುವ ಭಿನ್ನ ಸಂಸ್ಕೃತಿಯ, ಭಿನ್ನ ಕಲಿಕಾ ಸಾಮರ್ಥ್ಯದ , ಭಿನ್ನ ತೊಡಕುಗಳು ಹಾಗೂ ಶಕ್ತಿಗಳುಳ್ಳ, ತಮ್ಮ ಮಕ್ಕಳ ವಿಷಯದಲ್ಲಿ ಭಿನ್ನ ಆಕಾಂಕ್ಷೆ ಮತ್ತು ಕನಸುಗಳನ್ನು ಕಟ್ಟಿಕೊಂಡಿರುವ ತಾಯ್ತಂದೆಯರನ್ನು ಹೊಂದಿರುವ ಮಕ್ಕಳಿಗೋಸ್ಕರ ಈ ಬಹು - ಕಾರ್ಯ ಸಾಧನೆಯ ದಿರಿಸು ಧರಿಸಿ , ಅವರ ಬದುಕಿನಲ್ಲಿ ಬದಲಾವಣೆ ತರಲು ಸಿದ್ಧರಿದ್ದೇವೆ?

ವಿಷಯ ಸವಾಲಿನದ್ದು! ಕಷ್ಟದ್ದು ! ನಮಗೆ ಮೀರಿದ್ದು ! ಆದರೆ ಖಂಡಿತ ಅಸಾಧ್ಯವಾದುದಲ್ಲ !

ಮ್ಯಾಕ್ ಕೋರ್ಟ್ ಅವರ ವಿಧಾನಕ್ಕೆ ಬಹಳ ಹೊಂದಿಕೊಂಡಂತಿರುವ ಹಾಗು ಶಿಕ್ಷಣ ವ್ಯವಸ್ಥೆಯ ಇಂದಿನ ಸಂದರ್ಭದಲ್ಲಿ ಬಹಳ ಪ್ರಸ್ತುತವೆನಿಸುವ ಕಲಿಕೆಯ ರಚನಾತ್ಮಕ ವಿಧಾನದ ಬಗ್ಗೆ ಕೆಲವು ವಿಚಾರಗಳನ್ನು ಒಗ್ಗೂಡಿಸುವಾಗ *ದಿ ಟೀಚರ್ ಮ್ಯಾನ್* ನ ಬಗ್ಗೆ ಮಾತಾಡುವುದು ಸಮಯದ ಸದುಪಯೋಗವೇ ಸರಿ ಎನಿಸುತ್ತದೆ.

ಹಿಂದೆಲ್ಲ ಮಕ್ಕಳಾಟವೆಂದರೆ ಗೊತ್ತುಗುರಿಯಿಲ್ಲದ ಮುಖ್ಯವಲ್ಲದ ಚಟುವಟಿಕೆ ಎಂದೇ ಪರಿಗಣಿಸುತ್ತಿದ್ದರಿಂದ ರಚನಾತ್ಮಕ ಧೋರಣೆಗೆ ಅಷ್ಟಾಗಿ ಮಾನ್ಯತೆ ಕೊಡುತ್ತಿರಲಿಲ್ಲ. ಆದರೆ ಜ್ಞಾನದ ರಚನಾತ್ಮಕ ಸಿದ್ಧಾಂತ(constructivist theory)ದ ಮಹಾನ್ ಪ್ರವರ್ತಕರಾದ ಜೀನ್ ಪಿಯಾಜ್ಜೆ ಅವರು ಈ ಸಾಂಪ್ರದಾಯಿಕ ಯೋಚನೆಗಳಿಗೆ ಸೊಪ್ಪು ಹಾಕಲಿಲ್ಲ. ಮಕ್ಕಳಾಟವು ಮಕ್ಕಳ ಜ್ಞಾನಾತ್ಮಕ ಬೆಳವಣಿಗೆಯ ಮುಖ್ಯವಾದ ಅಂಶ ಎಂಬುದನ್ನು ಅವರು ಕಂಡುಕೊಂಡಿದ್ದು ಅದಕ್ಕೆ ವೈಜ್ಞಾನಿಕ

ಪುರಾವೆಯನ್ನೂ ಸಾಧಿಸಿ ತೋರಿಸಿದ್ದರು . ಇಂದಿನ ದಿನಗಳಲ್ಲಿ ಅನೌಪಚಾರಿಕ ಶಿಕ್ಷಣ ವಲಯ ಎಂದು ಕರೆಯಲ್ಪಡುವಲ್ಲಿ ರಚನಾತ್ಮಕ ಸಿದ್ಧಾಂತಗಳು ಬಹಳ ಪ್ರಭಾವ ಬೀರುತ್ತಿವೆ .

ಸಾಮಾಜಿಕ ರಚನಾತ್ಮಕತೆಯು(social constructivism) ಪ್ರತೀ ವಿದ್ಯಾರ್ಥಿಯನ್ನು ಒಬ್ಬ ಅನನ್ಯ ವ್ಯಕ್ತಿತ್ವವುಳ್ಳ ಅನನ್ಯ ಅವಶ್ಯಕತೆ ಹಾಗು ಹಿನ್ನೆಲೆಗಳುಳ್ಳ ಒಬ್ಬ ಪ್ರತ್ಯೇಕ ವ್ಯಕ್ತಿಯನ್ನಾಗಿ ಪರಿಗಣಿಸುತ್ತದೆ . ಈ ಸಾಮಾಜಿಕ ರಚನಾತ್ಮಕ ಧೋರಣೆಯ ಪ್ರಕಾರ , ಬೋಧಕರು ತಮ್ಮನ್ನು ತಾವು ಸುಗಮಕಾರ(ಫೆಸಿಲಿಟೇಟರ್)ರಾಗಿ ಹೊಂದಿಸಿಕೊಳ್ಳಬೇಕೇ ವಿನಃ ಶಿಕ್ಷಕರಾಗಿ ಅಲ್ಲ (Bauersfeld, 1995). ಶಿಕ್ಷಕ ಹೇಳುತ್ತಾನೆ; ಆದರೆ ಸುಗಮಕಾರನು ಕೇಳುತ್ತಾನೆ. ಶಿಕ್ಷಕನು ಮುಂದೆ ನಿಂತು ಪಾಠ ಮಾಡಿದರೆ;ಸುಗಮಕರನು ಹಿಂದೆ ಬೆನ್ನೆಲುಬಾಗಿ ನಿಂತಿರುತ್ತಾನೆ; ಶಿಕ್ಷಕನು ಪಠ್ಯಕ್ರಮಕ್ಕೆ ಅನುಗುಣವಾಗಿ ಉತ್ತರಗಳನ್ನು ಹೇಳಿಕೊಟ್ಟರೆ ಅದೇ ಸುಗಮಕಾರನು ಅಗತ್ಯ ಮಾರ್ಗಸೂಚಿಯನ್ನು ಒದಗಿಸಿ ಒಬ್ಬ ಕಲಿಕಾರ್ಥಿಗೆ ಸ್ವಯಂ ಪರಿಶ್ರಮದಿಂದ ಸೂಕ್ತ ಫಲಿತಾಂಶಕ್ಕೆ ಬಂದು ತಲುಪುವುದಕ್ಕೆ ಬೇಕಾದಂಥ ವಾತಾವರಣ ನಿರ್ಮಿಸಿಕೊಡುತ್ತಾನೆ. ಒಬ್ಬ ಶಿಕ್ಷಕನು ಹೆಚ್ಚಾಗಿ ಏಕಾಲಾಪವನ್ನು ಪ್ರಸಾರ ಮಾಡುತ್ತ ಹೋದರೆ ಸುಗಮಕಾರನು ತನ್ನ ವಿದ್ಯಾರ್ಥಿಗಳೊಂದಿಗೆ ನಿರಂತರವಾದ ಸಂವಾದದಲ್ಲಿ ತೊಡಗಿರುತ್ತಾನೆ (Rhodes and Bellamy, 1999).

ತನ್ನ ಇಂಗ್ಲಿಷ್ ತರಗತಿಯಲ್ಲಿ ಬಂದೊದಗುವ ವಿಭಿನ್ನ ಸನ್ನಿವೇಶಗಳಿಗೆ ತಕ್ಕಂತೆ ಮ್ಯಾಕ್ ಕೋರ್ಟ್ ಅವರು ತಮ್ಮ ಅಂತರ್ಬೋಧೆಯ ಮೂಲಕ ತಮಗೆ ಸರಿ ಕಂಡಂತೆ ಕಾರ್ಯ ನಿರ್ವಹಿಸಿದರೂ , ವಾಸ್ತವದಲ್ಲಿ ಅವರು ರಚನಾತ್ಮಕತೆಯ ಸಿದ್ಧಾಂತವನ್ನೇ ಪರಿಪಾಲಿಸುತ್ತ ಬಂದಿದ್ದು ಅವು ಕೆಳಕಂಡಂತೆ ಇವೆ :

. ಪಾಠ ನಡೆಯಬೇಕೆಂದರೆ ವಿದ್ಯಾರ್ಥಿಗಳ ಪ್ರತಿಕ್ರಿಯೆಗೆ ಆಸ್ಪದ ಕೊಡಬೇಕು.

. ಮುಕ್ತ ಅಂತ್ಯದ ಪ್ರಶೆಗಳನ್ನು ಕೇಳುವುದರ ಮೂಲಕ ಪ್ರಶ್ನಿಸುವ ಹುಮ್ಮಸ್ಸಿಗೆ ನೀರೆರೆಯಬೇಕು.

. ವಿದ್ಯಾರ್ಥಿಗಳೊಳಗೆಯೇ ಚರ್ಚೆಗೆ ಪ್ರೇರೇಪಿಸಬೇಕು.

. ವಿದ್ಯಾರ್ಥಿಯ ಕಲಿಕೆಗೆ ಬೇಕಾಗುವ ಹಲವಾರು ಸಂಪನ್ಮೂಲಗಳಲ್ಲಿ ಒಬ್ಬರಾಗಿರಬೇಕು.

. ವಿದ್ಯಾರ್ಥಿಗಳ ಪೂರ್ವ ಗ್ರಹಿಕೆಗಳನ್ನು(preconceptions) ಬದಲಾಯಿಸುವಂಥ ಅನುಭವಗಳನ್ನು ಕೊಡಮಾಡಬೇಕು.

. ವಿದ್ಯಾರ್ಥಿಗಳು ಸ್ಪಷ್ಟವಾಗಿ ಅಭಿವ್ಯಕ್ತಿಸತಕ್ಕದ್ದು ಎಂದು ಆಗ್ರಹಿಸಬೇಕು.

. ಅಧ್ಯಯನ ವಿಷಯದ ಜೀವಂತಿಕೆಯತ್ತ ವಿದ್ಯಾರ್ಥಿಗಳು ಕಣ್ತೆರೆದು ನೋಡುವಂತೆ ಮಾಡುವುದು.

. ವಿದ್ಯಾರ್ಥಿಯ ತಿಳುವಳಿಕೆಯ ಮಟ್ಟಕ್ಕೆ ಅನುಗುಣವಾದ ಸಮಸ್ಯೆಗಳನ್ನು ಒಡ್ಡುವುದು.

ತಮ್ಮ ಇಂಗ್ಲಿಷ್ ತರಗತಿಗಳಲ್ಲಿ ವಿದ್ಯಾರ್ಥಿಗಳನ್ನು ಅವರು ನಡೆಸುವ ಆಸಕ್ತಿಕರ ಪ್ರಯೋಗಗಳು, ಕಷ್ಟಕರ ವಿದ್ಯಾರ್ಥಿಗಳನ್ನು ಅವರ ಅವಶ್ಯಕತೆ ಹಾಗು ಆಕಾಂಕ್ಷೆಗಳನ್ನು, ಅವರ ಸುಖ ದುಃಖಗಳನ್ನು ಸೂಕ್ಷ್ಮವಾದ ಗ್ರಹಿಸಿ ನಿಭಾಯಿಸುವ ರೀತಿ ನಿಜಕ್ಕೂ ಕಣ್ತೆರೆಸುವಂಥದ್ದು .

ಶಾಲೆಯ ಮೂಲ ಉದ್ದೇಶವೇನು ಎಂಬ ಬಗ್ಗೆ ಮ್ಯಾಕ್ ಕೋರ್ಟ್ ಅವರು ನೀಡಿರುವ ಹೇಳಿಕೆಯನ್ನು ಪಾಲಿಸುವುದೇ ಈ ಪುಸ್ತಕ ಹಾಗೂ ಲೇಖಕರಿಗೆ ನಾವು ಸಲ್ಲಿಸಬಹುದಾದ ಉಚಿತ ಗೌರವ ಮನ್ನಣೆಯಾಗಿದೆ. ಅದೇನೆಂದರೆ," ನನಗನ್ನಿಸುವ ಪ್ರಕಾರ ಶಾಲೆಗಳು ಯುವ ಜನತೆಯ ಕ್ಷಮತೆ ಏನೇ ಆಗಿರಲಿ, ಆ "ಕ್ಷಮತೆಯನ್ನು" ಹೊರತರಲು ಶಕ್ತಿಮೀರಿ ಶ್ರಮಿಸಬೇಕು. ಶಾಲೆಯು ವಿದ್ಯಾರ್ಥಿಯ ಕುತೂಹಲವನ್ನು ಬೆಳೆಸಿ ವಿಸ್ತಾರ, ವಿಮೋಚನೆಗಳನ್ನು ನೀಡುವ ಒಂದು ಸ್ಥಳವಾಗಬೇಕಲ್ಲದೇ ಸಂಕುಚಿತವಾದ ಸ್ಥಳವಾಗಿರಬಾರದು".

ಶಿಕ್ಷಕರಾಗಿ , ತಂದೆತಾಯಿಗಳಾಗಿ ನಾವು ನಮ್ಮ ಮಕ್ಕಳಿಗೆ ಇದನ್ನೇ ಬಯಸುತ್ತೇವೆಯೇ ? ಅಥವಾ ಈ ಬಯಕೆ ಅತಿಯಾಯಿತೇ?

ಉಲ್ಲೇಖ :

. ರಚನಾತ್ಮಕತೆಯ ಬಗ್ಗೆ ಅಂತರ್ಜಾಲದಲ್ಲಿ ಒದಗಿಬಂದ ಮಾಹಿತಿ

**ಸೀತಾ ನಟರಾಜನ್** ಅವರು ಭಾರತದ ಕೃಷ್ಣಮೂರ್ತಿ ಸಂಸ್ಥೆಯ ರಿಷಿ ವ್ಯಾಲಿ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ. . ಅವರು ಅಲ್ಲಿ ಇಂಗ್ಲಿಷ್ , ಪರಿಸರ ವಿಜ್ಞಾನ ಹಾಗೂ ಸಮಾಜ ವಿಜ್ಞಾನವನ್ನು ಹೇಳಿಕೊಡುತ್ತಾರೆ . ಕಲ್ಕತ್ತ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಭಾಷೆಯಲ್ಲಿ ಮಾಸ್ಟರ್ ಪದವಿ ಪಡೆದಿರುವ ಇವರ ಆಸಕ್ತಿಗಳು ಓದುವುದು,, ಕಾವ್ಯ ಹಾಗು ವರ್ಣಚಿತ್ರ ರಚನೆ. ಇವರು 'ಎಕ್ಸ್ಟ್ರಾ ಲೆಸೆನ್ ' ನ ವಿದ್ಯಾಭ್ಯಾಸಿಗಳು ಕೂಡ ಆಗಿದ್ದಾರೆ. ಇವರನ್ನು ಈ ಮಿಂಚಂಚೆಯ ಮೂಲಕ ಸಂಪರ್ಕಿಸಬಹುದು .

nats_k@yahoo.com